

# ರೈಲು ಅಲ್ಲ; ಕಾರು!

ಈ ವಾಹನದ ಗಾತ್ರ ನೋಡಿ ಬೆರಗಾಗಿ ಬಿಟ್ಟಿರಾ? ಇದು ಲ್ಯಾಂಡಿಂಗ್ ಆದ ವಿಮಾನವೂ ಅಲ್ಲ, ಮಿನಿ ರೈಲೂ ಅಲ್ಲ. ಅದು ಅಮೆರಿಕದ ಕನಸಿನ ಕಾರು.

ಕ್ಯಾಲಿಫೋರ್ನಿಯಾದ ಜೇ ಓಹ್ರ್ಯಾಗರ್ ನಿರ್ಮಿಸಿದ ಈ ಕಾರು ನೂರು ಅಡಿ ಉದ್ದವಾಗಿದೆ. ಇಪ್ಪತ್ತಾರು ಚಕ್ರಗಳಿವೆ. ಗಜಗಾತ್ರದ ನೀರಿನ ಹಾಸಿಗೆಗಳಿವೆ. ಲಿವಿಂಗ್ ರೂಮ್ಗಳಿದ್ದು, ಇಬ್ಬರು ಚಾಲಕರಿಗೆ ಪ್ರತ್ಯೇಕ ಕೊಠಡಿಗಳಿವೆ. ಇದರಲ್ಲಿ ಅತ್ಯಾಧುನಿಕ ಸೌಲಭ್ಯಗಳು ಇವೆ. ಹೆಲಿಕಾಪ್ಟರ್ ಲ್ಯಾಂಡಿಂಗ್ ಸೈಟೂ ಇದೆ. ಕಷ್ಟಪಟ್ಟು ತಯಾರಿಸಿದರೂ ರಸ್ತೆಗಿಳಿಸಲು ರಸ್ತೆ ಸಾರಿಗೆ ಅಧಿಕಾರಿಗಳು ಅನುಮತಿ ಕೊಡಲಿಲ್ಲ. ಹೀಗಾಗಿ ನ್ಯೂಯಾರ್ಕ್‌ನ ಅಟೋಸಿಯಂ ಅಟೋಮ್ಯಾಟಿಕ್ ಮ್ಯೂಸಿಯಂನಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಸದ್ಯ ಬಳಕೆಯಾಗುತ್ತಿದೆ.

-ಪ. ರಾಮಕೃಷ್ಣ ಶಾಸ್ತ್ರಿ

